| ಶ್ರೀ ಭಗವಾನ್ ಮಹಾವೀರ್ ಜೈನ್ ಕಾಲೇಜು<br>ವಿ.ವಿ. ಪುರಂ, ಬೆಂಗಳೂರು–560 004<br><br>Mock Paper-2 | ತರಗತಿ: | ದ್ವಿತೀಯ ಪಿ.ಯು.ಸಿ |
|---|---|---|
| | ವಿಷಯ: | ಕನ್ನಡ |
| | ಗರಿಷ್ಠ ಅಂಕಗಳು: | 100 |
| | ಸಮಯ: | 3:15 ಗಂಟೆಗಳು |

***ಸೂಚನೆ:– ಪ್ರಶ್ನೆ ಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.***

**ಅ–ವಿಭಾಗ**

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: 1 x 10 =10**

1. ವಿಭೀಷಣ ಯಾರು?
2. ಯಾವುದರಿಂದ ಪರಿಮಳವನ್ನು ಅರಿಯಬಹುದು?
3. ಮನದೊಳಗೆ ಹಗೆಗಳನ್ನು ಹಿಂಡಿದವರಾರು?
4. ಜೀಸಸ್‌ನ ಮುಖಮುದ್ರೆ ಏನನ್ನು ನುಡಿವಂತಿದೆ?
5. ಭಾಷೆ ಯಾವುದಕ್ಕಿಂತ ದೊಡ್ಡದು?
6. ಕಲಾಂರವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?
7. ಕಲ್ಲಪ್ಪನವರ ಗೂಢಪ್ರಶ್ನೆ ಯಾವುದು?
8. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು?
9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
10. ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು?

**ಆ–ವಿಭಾಗ**

**II. ನಾಲ್ಕು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ:– 2 x 4 = 8**

11. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
12. ಧನ ಮತ್ತು ಸುತನ ವಿಷಯದಲ್ಲಿ ಸೋಮನಾಥನ ಅಭಿಪ್ರಾಯವೇನು?
13. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?
14. ಕವಯಿತ್ರಿ ಮುಗಿಲತ್ತ ಕೈಚಾಚಿ ಏಕೆ ನಿಂತಿದ್ದಾರೆ?
15. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?

**ಆ. ಮೂರು ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 2 x 3 = 6**

16. ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ?
17. ಧಣಿಪತ್ನಿ ಬೆಳ್ಳಿಲೋಟವನ್ನು ಹೇಗೆ ಪರಿಚಯಿಸಿದ್ದಾಳೆ?
18. ಕಲಾಂರವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

**ಇ) ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:– 2 x 3 = 6**

20. ತನ್ನ ಕೆಲಸ ಅತ್ಯಂತ ಅಪಾಯಕಾರಿ ಎಂದು ದುರ್ಗಪ್ಪ ವಿವರಿಸಿದ್ದು ಹೇಗೆ?

21. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

22. ಲೇಖಕರು ಕ್ಯಾಲಿಕ್ಯುಲೇಟರ್‌ನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದು ಹೇಳಿದರು?

23. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹಿರಾತು ನೀಡಿದರು?

## ಇ – ವಿಭಾಗ

**III ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ: 3 x 2 = 6**

24. ಅನ್ಯಲಿಂಗಗಳ ನೆನೆವನೆ ನಿಮ್ಮ ಭಕ್ತನು

25. ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ

26. ಭಾಳ ಮರುಗ್ಯಾಳ ಮನದಾಗ.

**ಆ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

27. ದುರಂತದ ಮೂಲ ಬೀಜಗಳು ಚಹಾಗಿಡದ ರೂಪದಲ್ಲಿ ಬಂದವು

28. ನನ್ನ ದೃಷ್ಟಿಯಲ್ಲಿ ವಾರ್ತಾ ಇಲಾಖೆ ಇದ್ದಂತೆ

**ಇ) ಯಾವುದಾದರೂ ಒಂದು ವಾಕ್ಯ ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

29. ನಂಗೇನು ಈ ನಾಯಿಗಳನ್ನು ಕಂಡರೆ ಪ್ರೀತಿಯಾ ಸ್ವಾಮಿ!

30. ಕೋವಿ ಸಿಕ್ಕಿದೆ. ಆದರೆ ಹೆಣ ಸಿಗಲಿಲ್ಲ.

## ಈ – ವಿಭಾಗ

**IV ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 3= 12**

31. ರಾವಣನ ಮನಃ ಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ?

32. ಸಮಾಜ ಕಂಟಕರ ಬಗೆಗೆ ಪುರಂದರ ದಾಸರ ಅಭಿಪ್ರಾಯಗಳನ್ನು ಸಂಗ್ರಹಿಸಿರಿ?

33. ಯಾವ ಸ್ಥಳಗಳಲ್ಲಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ? ಚರ್ಚಿಸಿ?

34. ವೃದ್ಧರ ತವಕ – ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ?

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

35. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನವೇನು?

36. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನಾನುಕೂಲಗಳಾವುವು?

37. ಹಳ್ಳಿಯ ಹೋಟೇಲುಗಳಲ್ಲಿ ಬಂದ ನವೀನತೆಯ ಕುರಿತು ಬರೆಯಿರಿ.

**ಇ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ: 4 x 2 = 8**

38. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

39. ದುರ್ಗಪ್ಪನಿಗೆ ಲೈನ್‌ಮನ್ ಕೆಲಸ ರೋಸಿ ಹೋಗಲು ಕಾರಣಗಳೇನು?

40. ಡ್ರೈವರ್ 'ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಆನೆ ಕಾರಣವೆ ವಿವರಿಸಿ?

### ಉ – ವಿಭಾಗ

**V ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ.** **5 x 1 = 5**

41. ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಳಮಂ॥

42. ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರುಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ.

### ಭಾಷಾಭ್ಯಾಸ

**VI ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ:** **2 x 6 = 12**

43. ಈ ಪದಗಳಿಗೆ ಅರ್ಥ ಬರೆಯಿರಿ. : ಉಷೆ, ಕ್ರೋಧ

44. ದ್ವಿರುಕ್ತಿಗೆ ಎರಡು ಉದಾಹರಣೆ ಕೊಡಿ.

45. ಇವುಗಳ ಗುಣವಾಚಕ ಗುರ್ತಿಸಿ. : ಮುಗ್ಧ ಜೀವಿ, ಹಿತವಚನ

46. ಇವುಗಳ ಧಾತುಗಳನ್ನು ಗುರ್ತಿಸಿ:– : ಬಾರನು, ನಿಂತರು

47. ಇವುಗಳ ಕಾಲವನ್ನು ಸೂಚಿಸಿ. : ಕುಣಿಯುತ್ತಿತ್ತು, ಬರುವರು

48. ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ:– : ಎಳ್ಳುನೀರು ಬಿಡು, ಮೂಗುತೂರಿಸು

49. ಇವುಗಳ ನಾನಾರ್ಥಗಳನ್ನು ಬರೆಯಿರಿ:– : ಬಟ್ಟೆ, ಅರಸು

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ.** **5 x 1 = 5**

50. ರಕ್ತದಾನ ಮತ್ತು ನೇತ್ರದಾನಗಳ ಮಹತ್ವ

51. ಕ್ರೀಡೆ ಮತ್ತು ನಮ್ಮ ಆರೋಗ್ಯ

**ಇ) ಪತ್ರಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ.** **4 x 1 = 4**

52. ನಿಮ್ಮ ಉನ್ನತ ವಿದ್ಯಾಭ್ಯಾಸಕ್ಕೆ ಶೈಕ್ಷಣಿಕ ಸಾಲ ಸೌಲಭ್ಯ ಕೋರಿ ಬ್ಯಾಂಕ್ ಮುಖ್ಯ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ?

53. ನಿಮ್ಮ ವಿದ್ಯಾಲಯದಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ಕುರಿತು ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.

**ಈ) ಈ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **4 x 1 = 4**

54. ದೇಶ ಸುತ್ತಬೇಕು, ಕೋಶ ಓದಬೇಕು.

55. ಸಜ್ಜನರ ದು:ಖ, ದುರ್ಜನರ ಸಿರಿ ಶಾಶ್ವತವಲ್ಲ.

✲✲✲✲✲